ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	787
2	ಸದಸ್ಯರ ಹೆಸರು	:	ಶ್ರೀ. ಅರವಿಂದ ಕುಮಾರ್ ಅರಳಿ
3	ಉತ್ತರಿಸಬೇಕಾದ ಸಚಿವರು	:	ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
4	ಉತ್ತರಿಸಬೇಕಾದ ದಿನಾಂಕ	:	10.03.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಗೆ 2007-08ರಲ್ಲಿ ತೋಟಗಾರಿಕೆ ವಿಜ್ಞಾನಗಳ ಕಾಲೇಜು ಮಂಜೂರಾಗಿದ್ದು, ಅದಕ್ಕಾಗಿ ದಿನಾಂಕ: 15.02.2014 ರಲ್ಲಿ ಸರ್ಕಾರವು ಸರ್ವೆ ನಂ.287/1 ರಲ್ಲಿ 40 ಎಕರೆ ಹಾಗೂ 20 ವಸತಿ ಗೃಹಗಳನ್ನು ನಿಗದಿಪಡಿಸಿದ ದರದಲ್ಲಿ ರೇಷ್ಮೆ ಇಲಾಖೆಯಿಂದ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲು ಆದೇಶ ಮಾಡಿರುವುದು ನಿಜವೇ;	ಹೌದು. ರೇಷ್ಮೆ ಇಲಾಖೆಯಿಂದ ಆದೇಶ ಹೊರಡಿಸಲಾಗಿದೆ.
ಆ)	ಇಲ್ಲಿಯವರೆಗೆ ರೇಷ್ಮೆ ಇಲಾಖೆಯಿಂದ ತೋಟಗಾರಿಕೆ ಇಲಾಖೆಗೆ ಹಸ್ತಾಂತರವಾಗದಿರಲು ಕಾರಣವೇನು?	ರೇಷ್ಮೆ ಇಲಾಖೆಯ ಆದೇಶದಲ್ಲಿ ಹಸ್ತಾಂತರಿಸಬೇಕಾದ ಜಮೀನು ಮತ್ತು ವಸತಿ ಗೃಹಗಳಿಗೆ ಮೌಲ್ಯಮಾಪನ ಮೊತ್ತವನ್ನು ಪಾವತಿಸುವಂತೆ ಆದೇಶಿಸಲಾಗಿದೆ. ರೇಷ್ಮೆ ಇಲಾಖೆಯಿಂದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲು ಉದ್ದೇಶಿಸಿರುವ 40 ಎಕರೆ ಜಮೀನಿಗೆ ಪ್ರತಿ ಎಕರೆಗೆ ರೂ.5.62 ಲಕ್ಷದಂತೆ ಒಟ್ಟು ರೂ.2.248 ಕೋಟಿಗಳ ಮೌಲ್ಯವನ್ನು ಮತ್ತು 20 ವಸತಿ ಗೃಹಗಳಿಗೆ ರೂ.1.343 ಕೋಟಿಗಳ ಮೌಲ್ಯವನ್ನು ಅಂದರೆ ಒಟ್ಟಾರೆ ರೂ.3.591 ಕೋಟಿಗಳ ಮೌಲ್ಯವನ್ನು ಬೀದರ್ ಜಿಲ್ಲಾಧಿಕಾರಿಗಳ ಕಛೇರಿ ನಿಗದಿಪಡಿಸಿರುತ್ತದೆ. ಆದರೆ, ಹಣಕಾಸಿನ ಕೊರತೆ ಇರುವುದರಿಂದ ಈ ಹಣವನ್ನು ಪಾವತಿಸಲು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಸಾಧ್ಯವಾಗಿರುವುದಿಲ್ಲ. ಈ ಜಮೀನು ಮತ್ತು ವಸತಿ ಗೃಹಗಳನ್ನು ಉಚಿತವಾಗಿ ಒದಗಿಸಲು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಕೋರಿರುವ ವಿಷಯವು ಪರಿಶೀಲನೆಯಲ್ಲಿದೆ..

HORTI 94 HGM 2020

(ನಾರಾಯಣ ಗೌಡ)

ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು